O.S. No- 21/2020

Pw-1

<u>ದಿನಾಂಕಃ 01-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲುಃ ಶ್ರೀ. RRK 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದ–**

ನಾನು ನೇಕಾರಿಕೆ ಕೆಲಸ ಮಾಡುತ್ತೀನೆ. ಕೈ ಮಗದಿಂದ 2 ದಿನಕ್ಕೆ ಒಂದು ಸೀರೆಯನ್ನು ಮಾಡುತ್ತೀನೆ. ಒಂದು ಸೀರೆಗೆ 45 ರೂ ಬೆಲೆ ಬರುತ್ತದೆ. ಒಂದು ತಿಂಗಳಿಗೆ 1500/- ಗಳಿಕೆ ಬರುತ್ತದೆ. ನೇಕಾರಿಕೆ ಕೆಲಸದಿಂದ ನನಗೆ ಯಾವುದೇ ಉಳಿತಾಯ ಆಗುವುದಿಲ್ಲ ಎಂದರೆ ಸರಿಯಲ್ಲ. ಮನೆಯಲ್ಲಿ ನಾವು ಒಟ್ಟು 4 ಜನ ವಾಸ ಮಾಡುತ್ತೀವೆ ನಾನುಮತ್ತು ನನ್ನ ಹೆಂಡತಿ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಹೆಂಡತಿಯೂ ಸಹ ನೇಕಾರಿಕೆ ಕೆಲಸ ಮಾಡುತ್ತಾಳೆ. ನೇಕಾರಿಕೆ ಹೊರತುಪಡಿಸಿ ನನಗೆ ಯಾವುದೇ ಉದ್ಯೋಗ ಇರುವುದಿಲ್ಲ ಸಾಕ್ಷಿ 1 ಎಕರೆ ಹೊಲವನ್ನು ಮಾರಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಪಾಲಿನ 1 ಎಕರೆ ಹೋಲವನ್ನು ಸುಮಾರು 4-5 ವರ್ಷಗಳಿಂದ ಮಾರಾಟ ಮಾಡಿರುತ್ತೇನೆ. ಮಾರಾಟ ಮಾಡಿದ ಕಾಗದ ಪತ್ರ ನನ್ನ ಬಳಿ ಇದೆ ನಾನು ನನ್ನ ಜಮೀನ್ನು 6,30,000/- ಮಾರಾಟ ಮಾಡಿರುತ್ತೇನೆ. ನಿಖವಾರವಾಗಿ ಯಾವ ದಿನ ಮತ್ತು ಸಾಲಿನಲ್ಲಿ ನನ್ನ ಜಮೀನ್ನು ಮಾರಾಟ ಮಾಡಿದ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಸದರಿ ಜಮೀನನ್ನು ನನ್ನ ಪ್ರಾಪಂಚಿಕ ಅಡಚಣೆ ಸಲುವಾಗಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಮಕ್ಕಳ ಲಗ್ನ , ಸಾಲ ತೀರಿಸಲು ಮತ್ತು ಹೋಗಿ ಬರಲು ದೂರ ಆಗುತ್ತದೆ ಎಂದು ನಾನು ನನ್ನ ಜಮೀನನ್ನು ಮಾರಾಟ ಮಾಡಿರುತ್ತೇನೆ. ಸದರಿ ಮಾರಾಟ ಮಾಡಿದ ಬಂದ ಹಣದಿಂದ ಈಗ ನನ್ನ ಬಳ್ಳಿ 3,00,000/-ಉಳಿತಾಯ ಮಾಡಿರುತ್ತೇನೆ. ಸದರಿ 3,00,000/- ರೂ ಉಳಿತಾಯ ಮಾಡಿದ ಬಗ್ಗೆ ತೋರಿಸಲು ದಾಖಲೆಗಳನ್ನು ನ್ಯಾಯದ ಮುಂದೆ ತಂದು ಹಾಜರಪಡಿಸಲು ನನಗೆ ಯಾವುದೇ ರೀತಿ ತೊಂದರೆ ಇಲ್ಲ. ಸದರಿ ಹಣವನ್ನು ನಾನು ಜಮಖಂಡಿಯ ಅರ್ಬನ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುತ್ತೇನೆ. ಅದು ಇನ್ನು ಚಾಲ್ತಿಯಲ್ಲಿರುತ್ತದೆ.

ನನಗೂ ಮತ್ತು ಮೃತ ಲಕ್ಷ್ಮಣ ನಡುವೆ ಸ್ನೆಹೀತ ಇತ್ತು. ಲಕ್ಷ್ಮಣ ಇತನ್ನು ಊರಿನಲ್ಲಿ ಕುಡಿದು ಹಾವು ಹಿಡಿಯುತ್ತಿದ್ದ ಓಡಾಡುತ್ತಿದ್ದ ಮತ್ತು ಊರು ಊರು ಅಡಾಡುತ್ತಿದ್ದ ಮತ್ತು ಇಸ್ಪೆಟ ಆಡುವ ಚಟ್ಟ ಇತ್ತು ಎಂದರೆ ಸರಿಯಲ್ಲ. ಆತನಿಗೆ ಮನೆತನದ ಜವಾಬ್ದಾರಿ ಇರಲಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಣ ಇತನ ಬಗ್ಗೆ ಪೇಪರಿನಲ್ಲಿ ಪ್ರಕಟಣೆ ಯಾದ ಬಗ್ಗೆ ನಾನು ಕೇಳಿಲ ಮತ್ತು ನೋಡಿರುವುದಿಲ್ಲ. ಲಕ್ಷ್ಮಣ ಇತನು ಕೇಲಸ ಮಾಡುತ್ತ ಅಡಾಡುತ್ತಿದ್ದನ್ನು ಎನು ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ನಿಕರವಾಗಿ ಹೇಳಲು ಬರುವುದಿಲ್ಲ. ಈಗ ಸಾಕ್ಷಿಗೆ ದಿನಾಂಕಃ 11-12-2018 ನೇ ವಿಜಯವಾಣಿ ಪತ್ರಿಕೆಯ ಪ್ರಕಟಣೆಯಲ್ಲಿ ಲಕ್ಷ್ಮಣ ಇತನು ಹಾವು ಹಿಡಿದ್ದ ಬಗ್ಗೆ ಛಾಯಾ ಚಿತ್ರವನ್ನು ನೋಡಿ ಸಾಕ್ಷಿ ಒಪ್ಪಿದ ನಿಡಿ 1 ಎಂದು ಗುರುತ್ತಿಸಲಾಯಿತು. ಆತನ್ನು ಎನು ಮಾಡುತ್ತಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

ನನ್ನ ಮತ್ತು ಲಕ್ಷ್ಮಣ ನಡುವೆ ಮನೆಯ ವ್ಯವಹಾರ ಇದ್ದ ಬಗ್ಗೆ ಯಾರು ಹೇಳಿ ತಿಳಿಸಿದ ಬಗ್ಗೆ ನನಗೆ ಹೇಳಲು ಬರುವುದಿಲ್ಲ ಆದರೆ ಊರಿನ ಜನರು ನನಗೆ ತಿಳಿಸಿದರೂ. ಅವರು ಯಾರು ಎಂದು ನನಗೆ ಹೇಳಲು ಬರುವುದಿಲ್ಲ. ಪೇಪರನಲ್ಲಿ ಮನೆಯ ಮಾರಾಟ ಮಾಡುತ್ತಿದ್ದ ವಿಚಾರವನ್ನು ಲಕ್ಷ್ಮಣ ಇತನ್ನು ಕೊಟ್ಟಿರಲಿಲ್ಲ. ಲಕ್ಷ್ಮಣ ಇತನ್ನು ಕುಡಿದ ನಿಶೆಯಲ್ಲಿ ಬೇರೆಯವರ ಬಳಿ ಬಡ್ಡಿ ಸಾಲ ಪಡೆದುಕೊಳುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಊರಿನಲ್ಲಿ ಕೈಗಡ ಪತ್ರವನ್ನು ಬರೆದುಕೊಟ್ಟು ವಕೀಲರು ಮೂಲಕ ನೋಟಿಸು ಸಹ ಕಳುಹಿಸಿಕೊಡುತ್ತಿದ್ದೆ ಎಂದರೆ ಸರಿಯಲ.

ರಾಜು ರಾಠೋಡ ಮತ್ತು ಲಕ್ಷ್ಮಣ ಇತನ್ನು ಇಬ್ಬರೂ ಕೂಡಿ ನನ್ನ ಬಳ್ಳಿ ಲಕ್ಷ್ಮಣ ಇತನಿಗೆ ಅಡಚಣೆ ಸಲುವಾಗಿ ಹಣ ಬೇಕಾಗಿದೆ ಎಂದು ಬಂದಿರುತ್ತಾರೆ. ನಾನು ಯಾವ ಅಡಚಣೆ ಇದ ಬಗ್ಗೆ ಅವರಿಗೆ ಕೇಳಿಲ್ಲ , ಅವರು ಸಹ ಕೇಳಿರುವುದಿಲ್ಲ. ಅಡಚಣೆ ಸಲುವಾಗಿ ನನ್ನ ಬಳ್ಳಿ 2,50,000/- ಹಣವನ್ನು ಬೇಡಿರುತ್ತಾರೆ. ಅದಕ್ಕೆ ಯಾವುದೇ ಒಂದು ಕಾಗದ ಪತ್ರ ಬರೆದುಕೊಡು ಎಂದು ಕೇಳಿರುತ್ತೇನೆ ನನಗೆ ರಾಜು ಮತ್ತು ಲಕ್ಷ್ಮಣ ಇಬ್ಬರೂ ಬಸ್ಟ್ಯಾಂಡ ಹತ್ತಿರ ಊರಿಗೆ ಹೋಗುವಾಗ ಸಿಕ್ಕಿರುತ್ತಾರೆ. ಅಲ್ಲಿ ಯಾವುದೇ ಮಾತು ಕತೆ ಆಗಿರುವುದಿಲ್ಲ ಲಕ್ಷ್ಮಣ ಇತನ್ನು ಕರಿಸಿದ ಮೇರೆಗೆ ನಾನು ಅವರ ಮನೆಗೆ ಹೋಗಿರುತ್ತೇನೆ. ಅದೇ ದಿನ ಸಂಜೆ ಹೋಗಿ ಬೇಟ್ಟಿಯಾಗಿ ಬಂದಿದ್ದು ಪುನಹ ಮರುದಿನ ನಾನು ಬಸ್ಸ ನಿಲ್ದಾಣ ಬಳಿ ದಾಗ ಅವರು ಬಂದರೂ ಎಲ್ಲರೂ ಕೂಡಿ ಅವನ ಮನೆ ಹೋಗಿರುತ್ತಾರೆ. ವ್ಯವಹಾರದ ಮಾತುಕತೆ ಲಕ್ಷ್ಮಣ ಇತನ ಮನೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಾನು ರಾಜು ರಾಠೋಡ, ಶಂಕರ ಕೂರಚಲಿ, ಮತ್ತು ಲಕ್ಷ್ಮಣ ಮತ್ತು ಅತನ ಹೆಂಡತಿ ಹಾಜರಿದ್ದರೂ ಇವರನ್ನು ಹೊರತ್ತುಪಡಿಸಿ ಬೇರೆ ಯಾರು ಇರಲಿಲ್ಲ. ಅಲ್ಲಿ ಹಣದ ಅಡಚಣೆಗಾಗಿ ಹಣ ಬೇಕಾಗಿದೆ ಹೇಳಿ ಮನೆ ನೊಂದು ಮಾಡಿಕೊಡುತ್ತೇವೆ ಎಂದು ಮಾತುಕತ್ತೆ ಆಗಿರುತ್ತದೆ.

ನಾನು ಮೊದಲನೆ ಸಲ ಮತ್ತು ಎರಡನೆ ಸಲ ಮತ್ತು ಮೂರನೆ ಸಲ ಲಕ್ಷ್ಮಣ ಇತನ ಮನೆಗೆ ಹೋದ ಬಗ್ಗೆ ದಿನಾಂಕ ನನಗೆ ಹೇಳಲು ಬರುವುದಿಲ್ಲ ದಾಖಲಾತಿಗಳನ್ನು ನೋಡಬೇಕು ಎಂದು ನುಡಿಯುತ್ತಾರೆ. ನಾನು ಯಾವದಿನದದು ಎಷ್ಟು ಹಣ ನೀಡಿದ ಬಗ್ಗೆ ಲೆಕ್ಕ ಬರೆದಿಲ್ಲ ಮಾತುಕತ್ತೆ ಆದ ದಿನದಂದು ಯಾವುದೇ ಕಾಗದ ಪತ್ರ ಬರೆಸಿರುವುದಿಲ್ಲ. ಆ ದಿನದಂದು ಇಸಾರಗೆ ಯಾವುದೇ ಹಣ ನೀಡಿರುವುದಿಲ್ಲ. ನನಗೆ ವೈಯಕ್ತಿಕವಾಗಿ ಯಾವ ದಿನದಂದು ಕಾಗದ ಪತ್ರ ಬರೆದ ದಿನಾಂಕ ಗೊತ್ತಿಲ್ಲ ನಾನು ಲಕ್ಷ್ಮಣ ಇತನಿಗೆ 2,50,000/- ಹಣವನ್ನು ಕೊಟ್ಟಿರುತ್ತೇನೆ ಸಾಕ್ಷಿ ಮುಂದುವರೇದು 2,40,000/-ಹಣವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಹಣವನು ನಾನು ಬ್ಯಾಂಕಿನಿಂದ ತಂದು ಮನೆಯಲ್ಲಿ ಇಟ್ಟಿರುತ್ತೇನೆ. ಯಾವದಿನದಂದು ನಾನು ಆ ರೀತಿ ಜಮಖಂಡಿ ಅರ್ಬನ ಬ್ಯಾಂಕಿನಿಂದ ಹಣ ತಂದು ಇಟ್ಟಿದ ಬಗ್ಗೆ ನೆನಪಿಲ್ಲ. ಬ್ಯಾಂಕಿನಿಂದ ಹಣ ಪಡೆದ ಬಗೆಗ ಕಾಗದ ಪತ್ರಗಳು ಸಿಗುತ್ತದೆ ಅದು ನ್ಯಾಯಾದ ಮುಂದೆ ತಂದು ಹಾಜರಪಡಿಸಿಲು ನನಗೆ ಯಾವುದೆ ರೀತಿ ತೊಂದರೆ ಇರುವುದಿಲ್ಲ. ನಾನು ಜಮೀನು ಪಡೆದುಕೊಳ್ಳುಲು ಹಣವನ್ನು ಕೋಟಿರುತೇನೆ. ಲಕ್ಷ್ಮಣ ಇತನಿಗೆ ಸೇರಿದ ಮನೆಯನ್ನು ನೋಡಿರುತ್ತೇನೆ ಜಮೀನ ನೋಡಿರುವುದಿಲ್ಲ.

ಸಾಮಾನ್ಯವಾಗಿ ವ್ಯವಹಾರದ ಮಾಡುವ ಪೂರ್ವದಲ್ಲಿ ಜಮೀನಿನ ಕಾಗದ ಪತ್ರಗಳನ್ನು ನೋಡುತ್ತಾರೆ ಎಂದರೆ ಸರಿ. ಮನೆಯ ವಿಪಿಸಿ ನಂಃ 209 ಇರುತ್ತದೆ ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಆ ದಿನ 2,50,000/- ಲಕ್ಷಗೆ ಮಾತುಕತೆ ಆಗಿದ್ದು ನಾನು 2,40,000 ಹಣ ನೀಡಿದ್ದು ಉಳಿದ 10,000/- ಪಡೆದು ನೊಂದ ಮಾಡಿಕೋಡುತ್ತೇನೆ ಎಂದು ಮಾತುಕತೆ ಆಗಿತ್ತು. ಪತ್ರವನ್ನು ಬರೆಯಲು ಸೊಗಲಿ ಮುತ್ತಪ್ಪ ಮಾಹಿತಿ ಕೊಟ್ಟಿರುತ್ತಾರೆ. ದಾವಾ ಆಸ್ತಿ ಆಶ್ರಯ ಯೋಜನೆ ಅಡಿಯಲ್ಲಿ ಲಕ್ಷ್ಮಣ ಇತನಿಗೆ ಬಂದಿರುತ್ತದೆ. ಸರಕಾರದವರು ಮನೆ ಇಲ್ಲದವರಿಗೆ ಮತ್ತು ಅಸ್ತಿ ಇಲ್ಲದವರಿಗೆ ಮನೆ ಮಂಜೂರು ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಚಕ್ಕಬಂದಿ ಪೂರ್ವಕ್ಕೆ ಮತ್ತು ಉತ್ತರೆ ರಸ್ತೆ ಪಶ್ಚಿಮಕ್ಕೆ ಮಂಗಳವ್ವಾ ಲಮಾಣಿರವರ ಮನೆ. ಸಾಕ್ಷಿ ಮುಂದುವರೇದು ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ರಸ್ತೆ ಇದೆ ದಕ್ಷಿಣಕ್ಕೆ ಜಾನಾಬಾಯಿ ಲಕ್ಷ್ಮಣ ಲಮಾಣಿರವರ ಮನೆ ಮತ್ತು ಉತ್ತರಕ್ಕೆ ಮಂಗಳವ್ವಾ ಲಮಾಣಿರವರ ಮನೆ ಇದೆ. ಈ ಚಕ್ಕಬಂದಿಯಲ್ಲಿರುವ ಆಸ್ತಿಯ ಕಾಗದ ಪತ್ರಗಳನ್ನು ತಂದು ನಾಯ್ಯಾದ ಮುಂದೆ ಹಾಜರಪಡಿಸುತ್ತೇನೆ ದಾವಾ ಆಸ್ತಿಯ ಕ್ಷೇತ್ರ ನನಗೆ ಗೋತಿಲ್ಲ ಸೊಗಲಪಿರವರು ಬರೆದ ಕಾಗದ ಪತ್ರದ ಬಗ್ಗೆ ನನಗೆ ಸಂಪೂರ್ಣವಾಗಿ ಮಾಹಿತಿ ಇಲ್ಲ ಕಾಗದ ಪತ್ರವನಮ್ನಿ ನೋಡಬೇಕು ಎಂದು ನುಡಿಯುತ್ತಾರೆ . ನಾನು ಶಾಲೆ ಕಲ್ತಿತ್ತಿರುವುದಿಲ್ಲ ನಿಪಿ 2 ಬರೆದ ವಿಚಾರ ನನಗೆ

ಗೊತ್ತಿಲ್ಲ, ಈಗ ಸಾಕ್ಷಿಗೆ ನಿಪಿ 2 ತೋರಿಸಲಾಗಿ ಅದರಲ್ಲಿ ಎನು ಬರೆದಿದೆ ಎಂದು ಕೇಳಿದಾಗ ಸಾಕ್ಷಿ ಅದರಲ್ಲಿ ಬರೆದ ವಿಚಾರ ನನಗೆ ಓದಿ ಹೇಳಿದರೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ನಿಪಿ 2 ನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ 2 ರಲ್ಲಿ ನಾನು 2,50,000/- ಬರೆದ ಬಗ್ಗೆ ಬರೆದಿರುತ್ತಾರೆ. ಅದೇ ದಿನ ಖರೀದಿ ಪತ್ರ ನೊಂದ ಮಾಡಿಸಲು ತೊಂದರೆ ಇತ್ತು ಆತನಿಗೆ ನೊಂದು ಮಾಡಿಸಿಕೊಡಲು ಯಾವ ತೊಂದರೆ ಇದ್ದ ಬಗ್ಗೆ ನನಗೆ ಹೇಳಲು ಬರುವುದಿಲ್ಲ.

ಹಣದ ಮುಖ ಬೆಲೆಯೂ 500, 200, ಮತ್ತು 100 ರೂಪಾಯಿದ ಇದ್ದವು 2000 ಮತ್ತು 50 ನ್ನ ಮುಖ ಬೆಲೆಯ ನೋಟುಗಳು ಇರಲಿಲ್ಲ, ಸದರಿ ಮುಖ ಬೆಲೆಯ ನೋಟುಗಳು ಎಷ್ಟು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಹಣವನ್ನು ನಾನು ಎಣಿಸಿ ತಂದಿರುವುದಿಲ್ಲ, ನಾನು ಪತ್ರ ಗಾರ ಬಳಿ ಬೆಳ್ಳಿಗೆ 11-00 ಗಂಟೆಗೆ ಹೋಗಿರುತ್ತೇನೆ. ಆ ದಿನ ಲಕ್ಷ್ಮಣ ರಾಜು ರಾಠೋಡ ಶಂಕರ ಕೂರಲಚಿ ರವರು ಬಂದಿದ್ದರೂ ಇವರನ್ನು ಹೊರತ್ತುಪಡಿಸಿ ಬೇರೆ ಯಾರು ಬಂದಿರಲಿಲ್ಲ. ದಾವ ಆಸ್ತಿ ಮದರಖಂಡಿಯ ಗೂಡದಲ್ಲಿ ಇರುತ್ತದೆ ಎಂದರೆ ಸರಿ. ಸರ್ಕಾರದವರು ಆಶ್ರಯ ಯೋಜನೆಯಡಿಯಲ್ಲಿ ಖುಲ್ಲಾ ಜಾಗೆಯನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸರ್ಕಾರದವರು ಬಸವ ಯೋನೆಯಡಿಯಲ್ಲಿ ಮನೆಯನ್ನು ಕಟ್ಟಿಸಲು ಹಣ ಮಂಜೂರು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಣ ಇತನಿಗೆ ಪ್ರತಿವಾದಿಗಳಂತೆ ವಾರಸುದಾರರು ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಹೊರತುಪಡಿಸಿ ಪ್ರತಿವಾದಿಗಳಿಗೆ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೇದು ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಬೇರೆ ಮನೆ ಇದೆ ಎಂದು ನುಡಿಯುತ್ತಾರೆ. ಅದರ ಮನೆ ನಂಬರ ಗೊತ್ತಿಲ್ಲ ಪಂಚಾಯಿತಿಯಲ್ಲಿ ಅರ್ಜಿ ಕೊಟ್ಟರ ಅದರ ದಾಖಲಾತಿಗಳನ್ನು ತಂದು ನ್ಯಾಯದ ಮುಂದೆ ಹಾಜರಪಡಿಸರುತ್ತೇನೆ. ಒಂದನೆ ಪ್ರತಿವಾದಿ ಹೆಸರಿನಲ್ಲಿ ಬೇರೆ ಯಾವುದೇ ಮನೆ ಇಲ್ಲ , ಮನೆ ಇದೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಣ ಇತನ್ನು ಕುಡಿಯುವ ಚಟ್ಟ ಇತ್ತು ಆದ ಕಾರಣ ಊರಿನ ಹಿರಿಯರು ಸೇರಿ ಆತನ ಹೇಸರನಲ್ಲಿರಟುವ ಮನೆಯನ್ನು ಆತನ ಹೆಂಡತಿ ಮತ್ತು ಮಕ್ಕಳ ಹೇಸರಿನಲ್ಲಿ ಹಕ್ಕು ಬಿಟ್ಟು ಪತ್ರವನ್ನು ನೋಟರಿ ಬಳಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿ. ಒಂದನೆ ಪ್ರತಿವಾದಿ ಬೇರೆಯವರ ಹೊಲಕ್ಕೆ ಹೋಗಿ ದೂಡಿದ್ದು ತನ್ನ ಮಕ್ಕಳನ್ನು ಸಾಕುತ್ತಾ ಬಂದಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ.

ಶಂಕರ ಓಣಿ ಮತ್ತು ಆಕಾಶ ದೊಡಮನಿ ಶಂಕರ ಕೂರಲಚಿ ಮತ್ತು ಸಂತೋಷ ಪಾಟೀಲ , ಎಲ್ಲರೂ ಹುನ್ನೂರು ಗ್ರಾಮದವರ ಪರಿಚಯವಿರುತ್ತದೆ. ಇವರೇಲ್ಲರೂ ಲಕ್ಷ್ಮಣ ಇತನಿಗೆ ಕೂಡಿಯಲು ಮತ್ತು ಇಸ್ಪೆಟ ಆಟ ಆಡಲು ಹಣ ಕೊಡುತ್ತಿದ್ದರೂ , ಮತ್ತು ಲಕ್ಷ್ಮಣ ಇತನ್ನು ಯಾರಿಗೆ ಹಣಣ ನೀಡಿದ ಬಗ್ಗೆ ಒಂದು ಡೈರಿಯಲ್ಲಿ ಬರೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪುಸ್ತಕದಲ್ಲಿ ನನ್ನ ಹೇಸರು ಸಹ ನಮೂದು ಆಗಿದೆ ಎಂದರೆ ಸರಿಯಲ್ಲ. ಲಕ್ಷ್ಮಣ ಇತನ್ನು ಕೂಡಿತ್ತದಿಂದ ರಸ್ತೆಯಲ್ಲಿ ಮರಣ ಹೊಂದಿರುತ್ತಾನೆ ಎಂದರೆ ನನಗೆ ಗೋತ್ತಿಲ್ಲ ಆ ಸಮಯದಲ್ಲಿ ಲಕ್ಷ್ಮಣ ಇತನ್ನು ತನ್ನ ಶೇರಟಿನ ಜೇಬಿನಲ್ಲಿ ಯಾರು ಯಾರಿಗೆ ಎಷ್ಟು ಹಣದ ನೀಡಿದ ಬಗ್ಗೆ ಬರೆದಿರುತ್ತಾನೆ ಅದರಲ್ಲಿ 25,000 ಬಡ್ಡಿ ಸೇರಿಸಿ ಹಣ ನೀಡಿದ ಬಗ್ಗೆ ನನ್ನ ಹೆಸರು ಸಹ ಇರುತ್ತದೆ ಎಂದರೆ ಸರಿಯಲ್ಲ.

ನಾನು 2,40,000/- ಲಕ್ಷ್ಮಣ ಮತ್ತು ಆತನ ಹೆಂಡಿತಗೆ ಕೊಟ್ಟಿರುತ್ತೇನೆ. ಆ ದಿನ ಲಕ್ಷ್ಮಣ ಹೆಂಡತ್ತಿಯ ಸಹಿಯನ್ನು ನಿಪಿ 2 ರ ಮೇಲೆ ಪಡೆದುಕೊಂಡಿರುವುದಿಲ್ಲ, ಆಕೆಯೂ ಆ ಸಮಯದಲ್ಲಿ ತನ್ನ ಮನೆಯಲ್ಲಿ ಇದ್ದಳು ಸದರಿ ಕಾಗದ ಪತ್ರಕ್ಕೆ ರಾಜು ರಾಠೋಡ , ಶಂಕರ ಕೂರಲಚಿ , ಪವಾರರವರು ಸಹಿ ಮಾಡಿರುತ್ತಾರೆ ಇವನುನನ್ನು ಹೊರತ್ತುಪಡಿಸಿ ನಿಪಿ 2 ರ ಮೇಲೆ ಬೇರೆ ಯಾರು ಸಹಿ ಮಾಡಿರುವುದಿಲ್ಲ. ನಾನು ಲಕ್ಷ್ಮಣ ಇತನಿಗೆ

ಇಸಾರ ಹಣವಾಗಿ 2,40,000/– ಹಣ ಕೊಟ್ಟಿದೆ ಎಂದು ಸುಳ್ಳಾಗಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ಯಾವುದೇ ರೀತಿ ಸಾಲ ಮತ್ತು ಬೋಜಾ ಇರಲಿಲ್ಲ. ಲಕ್ಷ್ಮಣ ಇತನಿಗೆ ಯಾವುದೇ ಹಣ ಕೊಡದೆ ಆತನ ಕುಡಿದ ನಿಶೆಯಲ್ಲಿ ಇಸಾರ ಪತ್ರದ ಮೇಲೆ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ ಲಕ್ಷ್ಮಣ ಇತನಿಗೆ ಮನೆಯ ಜವ್ಹಾದಾರಿ ಇರಲಿಲ್ಲ , ಕುಡಿದು ಆಡಾಡುತ್ತಿದ್ದ , ಅದನ್ನು ದುರುಪಯೋಗಿಸಿ ನಿಪಿ 2 ರಂತೆ ಕೊಟ್ಟ ಇಸಾರ ಪತ್ರವನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ ಒಂದನೆ ಪ್ರತಿವಾದಿಗೆ ದಾವಾ ಆಸ್ತಿಯನ್ನು ಹೊರತ್ತುಪಡಿಸಿ ಬೇರೆ ಯಾವುದೇ ಆಸಿ ಇಲ್ಲ , ಒಂದನೆ ಕಷ್ಟುಪಟ್ಟು ದುಡಿದ್ದು ತನ್ನ ಮಕ್ಕಳನ್ನು ಸಾಕುತ್ತಾ ಬಂದಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಹೊರತುಪಪಿಡಿಸಿ ಪ್ರತಿವಾದಿಗಳಿಗೆ ಬೇರೆ ಯಾವುದೇ ಮನೆ ಇರುವುದಿಲ್ಲ ಅವರು ಬೀದಿ ಪಾಲು ಆಗುತ್ತಾರೆ ಎಂದರೆ ಸರಿಯಲ್ಲ. ಲಕ್ಷ್ಮಣ ಇತನ ಡೈರಿ ಸಿಕ ಬಳಿಕ ಪ್ರತಿವಾದಿಗಳು ಪೋಲಿಸ ಠಾಣೆಗೆ ಪಿರ್ಯಾದಿಯನ್ನು ಸಲ್ಲಿಸಲು ಹೊಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಊರಿನ ಹಿರಿಯರು ಬಂದು ಪ್ರತಿವಾದಿಗಳಿಗೆ ಪಿರ್ಯಾದಿ ಕೊಡಬೇಡಿ ದುಡಿದು ತಿನ್ನಿ ಎಂದು ತಾಖೀತು ಸಹ ಮಾಡಿರುತ್ತಾರೆ ಆದ ಕಾರಣ ಪ್ರತಿವಾದಿಗಳು ಯಾವುದೇ ಪಿರ್ಯಾದಿಯನ್ನು ಕೊಟ್ಟಿರುವುದಿಲ್ಲ.

ಈ ರೀತಿ ನಾನು ನೋಟಿಸು ಕೊಟ್ಟ ಬಳಿಕ ಪ್ರತಿವಾದಿಗಳು ಮೇಲೆ ಹೇಳಿದಂತೆ ತನ್ನ ವಕೀಲರ ಮೂಲಕ ನೋಟಿಸಿಗೆ ಮರು ಉತ್ತರವು ಸಹ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಲಕ್ಷ್ಮಣ ಇತನ್ನು ದಾವಾ ಆಸ್ತಿಯ ಕಾಗದ ಪತ್ರವನ್ನು ತಂದು ತೊರಿಸಿರುತ್ತಾನೆ 2,50,000/– ಹಣ ಪಡೆದ ಬಗ್ಗೆ ಲಕ್ಷ್ಮಣ ಇತನ್ನು ಹೇಗೆ ಉಪಯೋಗ ಮಾಡಿಕೊಂಡ ಬಗ್ಗೆ ನನ್ನ ವೆಯಯಕ್ತಿಕವಾಗಿ ಗೊತ್ತಿಲ್ಲ. ಲಕ್ಷ್ಮಣ ಇತನಿಗೆ ಮನೆತನದ ಯಾವುದೇ ಜವಾಬ್ದಾರಿ ಇರಲಿಲ್ಲ ಮತ್ತು ಇಸಾರ ಅಂತಾ ಹಣವನ್ನು ನಾನು ಲಕ್ಷ್ಮಣ ಇತನಿಗೆ ಕೊಟ್ಟಿಲ್ಲ , ಆತನ ದುಷ್ಟಚಟ್ಟಗಳ ದೂರುಪಯೋಗ ಪಡೆದುಕೊಂಡು ನಿಪಿ 2 ಇಸಾರ ಪತ್ರವನ್ನು ಕೊಟ್ಟಿಯಾಗಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಲಕ್ಷ್ಮಣ ಇತನ ಜೀವತ ಅವಧಿಯಲ್ಲಿ ಖರೀದಿ ಪತ್ರ ಮಾಡಿಕೊಡು ಎಂದು ನೋಟಿಸು ನಾನು ನೀಡಿರುವುದಿಲ್ಲ. ನಾನು ಲಕ್ಷ್ಮಣ ಇತನ ಹೆಂಡತಿಯನ್ನು ನೋಡಿರುತ್ತೇನೆ ಅವರ ಮಕಳ ಹೆಸರು ನನಗೆ ಗೊತಿಲ್ಲ . ನಾನು ಲಕ್ಷ್ಮಣ ಇತನ ಹೆಂಡತಿ ಮತ್ತು ಮಕ್ಕಳಿಗೆ ಲಕ್ಷ್ಮಣ ಇತನ್ನು ಕಾಗದ ಪತ್ರ ಬರೆದುಕೊಟಿರುತ್ತಾರೆ ಅದನ್ನು ಖರೀದಿ ಹಾಕಿ ಕೊಡಿ ಎಂದು ಕೇಳಲು ಹೋಗಿರುವುದಿಲ್ಲ. ಕಾಗದ ಬರೆಸಿದ್ದ ಬಗ್ಗೆ ಆಸ್ತಿ ಪಡೆಯಬೇಕು ಅಥವಾ ಹಣವಾದರೂ ವಸೂಲಿ ಮಾಡಬೇಕೆಂದು ನಾನು ನಮ ವಕೀಲರ ಮೂಲಕ ನೋಟಿಸು ಕಳುಹಿಸಿರುತ್ತೇನೆ ಎಂದರೆ ಸರಿ. ನಾನು ಲಕ್ಷ್ಮಣ ಇತನಿಗೆ ಯಾವುದೇ ಇಸಾರ ಹಣ ಕೊಡದೆ ಇದರೂ ಸಹ ಹೇಗಾದರೂ ಆಸ್ತಿ ಪಡೆಯಬೇಕೆಂದು ಮತ್ತು ಹಣ ವಸೂಲಿ ಮಾಡಲು ಈ ಕೊಟ್ಟಿ ಕೇಸನ್ನು ಲಕ್ಷ್ಮಣ ಇತನ ವಾರಸುದಾರರ ಮೇಲೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಲಕ್ಷಂಣ ಇತನಿಗೆ ಯಾವುದೇ ಹಣ ನೀಡಿಲ , ಆತನ್ನು ಹಣವನ್ನು ತನ್ನ ಮನೆ ಅಡಚಣಗಾಗಿ ಉಪಯೋಗಿಸಿಲ್ಲ ಆದ ಕಾರಣ ನಾನು ಕೋರಿದಂತೆ ಯಾವುದೇ ಪರಿಹಾರಕ್ಕೆ ಭಾದಿಸ್ತನಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/–

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮುಖಂಡಿ